ವಲಯವಾರು ತೆರಿಗೆ ಸಂಗ್ರಹಣೆ

1282(1607); ಶ್ರೀ ಹ್ಯಾರೀಸ್ .ಎನ್.ಎ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಲಯವಾರು ತೆರಿಗೆ ಸಂಗ್ರಹಣೆ ಎಷ್ಟು (ವಿವರ ನೀಡುವುದು)

ಆ) ತೆರಿಗೆ ಸಂಗ್ರಹಣೆಯನ್ನು ಚುರುಕುಗೊಳಿಸುವ ಮತ್ತು ಬಾಕಿ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹಾಗಿದ್ದಲ್ಲಿ, ವಲಯವಾರು ತೆರಿಗೆ ವಸೂಲಾತಿ ಸೇರಿದಂತೆ ಎಷ್ಟು ಕೋಟಿ ರೂ.ಗಳ ತೆರಿಗೆ ಸಂಗ್ರಹಣೆ ಕಾರ್ಯ ನಡೆಯಬೇಕಾಗಿದೆ;

ಈ) ಆರ್ಥಿಕ ಸಂಕಷ್ಟದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತೆರಿಗೆ ಸಂಗ್ರಹಣೆಯನ್ನು ವ್ಯವಸ್ಥಿತವಾಗಿ ಮಾಡುವ ಮೂಲಕ ಆರ್ಥಿಕ ಬಲವನ್ನು ಪಡೆಯುವಲ್ಲಿ ರೂಪಿಸಿದ ಕಾರ್ಯಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2013–14 ನೇ ಸಾಲಿನಲ್ಲಿ ದಿನಾಂಕ: 14–02–2014 ರ ವರೆಗೆ ವಲಯವಾರು ಸಂಗ್ರಹವಾಗಿರುವ ಆಸ್ತಿತೆರಿಗೆ ಮೊತ್ತ ₹ 1267.55 ಕೋಟಿಗಳು. ವಿವರಗಳನ್ನು ಅನುಬಂಧ–01 ರಲ್ಲಿ ಒದಗಿಸಲಾಗಿದೆ.

ಆ) ತೆರಿಗೆ ಬಾಕಿ ಇರುವ ಪ್ರಕರಣಗಳಲ್ಲಿ ಬಾಕಿ ತೆರಿಗೆಯನ್ನು ಸಂಗ್ರಹಿಸಲು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ ಅಧಿನಿಯಮದಡಿ ರಚಿಸಲಾದ ತೆರಿಗೆ ಸಂಗ್ರಹಣೆ ನಿಯಮಗಳಂತೆ ತೆರಿಗೆದಾರರಿಗೆ ನೋಟೀಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ತೆರಿಗೆಯನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2013–14 ನೇ ಸಾಲಿನಲ್ಲಿ ದಿನಾಂಕ: 14–02–2014 ರವರೆಗೆ ವಲಯವಾರು ಬಾಕಿ ಇರುವ ಆಸ್ತಿತೆರಿಗೆಯ ಒಟ್ಟು ಮೊತ್ತ ₹ 1232.45 ಕೋಟಿಗಳಾಗಿರುತ್ತದೆ.

ಈ) ಆಸ್ತಿತೆರಿಗೆ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ತೆರಿಗೆದಾರರಿಗೆ ನೋಟೀಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ತೆರಿಗೆಯನ್ನು ಸಂಗ್ರಹಿಸಲು ವಿಶೇಷ ತಂಡಗಳನ್ನು ರಚಿಸಲಾಗಿದೆ. ಹೆಚ್ಚಿನ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ತೆರಿಗೆದಾರರ ವಿವರಗಳನ್ನು ಪತ್ರಿಕಾ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಆದರೂ ಸಹ ತೆರಿಗೆಯನ್ನು ಪಾವತಿಸದಿದ್ದಲ್ಲಿ ಮುಂದೆ ಭೂ ಕಂದಾಯ ಕಾಯ್ದೆ ಅಡಿಯಲ್ಲಿ ತೆರಿಗೆ ಪಾವತಿಸದೇ ಇರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶ ಕಲ್ಪಿಸಲು ಕೆ.ಎಂ.ಸಿ ಕಾಯ್ದೆಯಲ್ಲಿ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

Annexure – 1

Details of Property Tax Target, Collection & Balance (including cesses) for the year 2013-14 upto 14-02-2014

₹ in crores

Sl. No.	Zone	Target	Collection	Balance
1	East	590.00	316.84	273.16
2	South	440.00	221.00	219.00
3	West	400.00	201.21	198.79
4	Yelahanka	150.00	103.80	46.20
5	Mahadevpura	430.00	192.00	238.00
6	Dasarahalli	110.00	43.84	66.16
7	Rajarajeshwar Nagar	120.00	48.86	71.14
8	Bommanahalli	260.00	140.00	120.00
	Total	**2500.00**	**1267.55**	**1232.45**